**ದಿಃ 18-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

ಪಾಟೀ ಸವಾಲು**ಃ ಶ್ರೀ ಎಸ್ ಜಿ ಎನ್ ವಕೀಲರಿಂದಃ**

ವಾದಿಯರು ಪಾಲು ಕೇಳಿ ದಾವೆ ಸಲ್ಲಿಸಿರುತ್ತಾರೆ. ಒಟ್ಟು ಎಷ್ಟು ಆಸ್ತಿಗಳು ಅಥವಾ ಎಷ್ಟು ಎಕರೆ ಸಲುವಾಗಿ ಹಾಕಿರುತ್ತಾರೆ ಗೊತ್ತಿಲ್ಲ. ವಾದಿಯರ ಕುಟುಂದ ಬಗ್ಗೆ ನನಗೆ ಗೊತ್ತಿದೆ. ಅವರು ನಾಲ್ಕು ಜನ ಹೆಣ್ಣು ಮಕ್ಕಳು ಹಾಗೂ ನಾಲ್ಕು ಜನ ಗಂಡು ಮಕ್ಕಳು ಇರುತ್ತಾರೆ. ದಾವಾ ಆಸ್ತಿಗಳು ವಾದಿಯರಿಗೆ ಅವರ ತಂದೆ ಇಂದ ಬಂದ ಆಸ್ತಿ ಎಂದರೆ ನಿಜ. ವಾದಿಯರು ಹಾಗೂ ಪ್ರತಿವಾದಿಯರ ಮೂಲ ಪುರುಷ ಇತನಿಗೆ 9 ಜನ ಮಕ್ಕಳು ಎಂದರೆ ನಿಜ. ಅವರಲ್ಲಿ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ತೀರಿಕೊಂಡಿರುತ್ತಾರೆ.

ನಮ್ಮ ತಂದೆ ಹಾಗೂ ದೊಡ್ಡಪ್ಪ ದೇವೆಂದ್ರಪ್ಪ ಖರೀದಿಸಿದ ಆಸ್ತಿಗಳ ಕ್ರಯ ಪತ್ರಗಳಿಗೆ ವಾದಿಯರು ಸಹಿ ಹಾಕಿರುವುದಿಲ್ಲ. ಕ್ರಯಪತ್ರಗಳಿಗೆ ಒಪ್ಪಿಗೆ ಸೂಚಿಸುವಂತೆ ನಾವು ವಾದಿಯರಿಗೆ ಇಲ್ಲಿಯವರೆಗೆ ಕೇಳಿಲ್ಲ. ಜಮೀನು ಖರೀದಿಸುವ ಮುಂಚೆ ಪತ್ರಿಕಾ ಪ್ರಕಟಣೆ ಹೊರಡಿಸಿರುವುದು ಹಾಗೂ ಕಾನೂನು ಅಭಿಪ್ರಾಯ ಪಡೆದುಕೊಂಡ ಬಗ್ಗೆ ಗೊತ್ತಿರುವುದಿಲ್ಲ. ಖರೀದಿ ಸಮಯದಲ್ಲಿ ಯಾವ ದಾಖಲೆಗಳನ್ನು ಪರಿಶೀಲಿಸಿದ್ದಾರೆ ನನಗೆ ಗೊತ್ತಿಲ್ಲ. ಖರೀದಿ ಮೊತ್ತವನ್ನು ಯಾವ ರೀತಿಯಲ್ಲಿ ನೀಡಿದ್ದಾರೆ ನನಗೆ ಗೊತ್ತಿಲ್ಲ. ವಾದಿಯರ ಮೂಲ ಪುರುಷ ಸಂಗಯ್ಯಾ ಯಾವಾಗ ಮರಣ ಹೊಂದಿದ್ದಾರೆ ನನಗೆ ಗೊತ್ತಿಲ್ಲ. ಸಂಗಯ್ಯಾ ಹಾಗೂ ಅವರ ಮಕ್ಕಳ ಮಧ್ಯೆ ವಾಟ್ನಿ ಆದ ಬಗ್ಗೆ ನನಗೆ ಗೊತ್ತಿಲ್ಲ. ಸಂಗಯ್ಯಾ ಹಾಗೂ ಆತನ ಸಹೋದರರ ಮಧ್ಯೆ ವಾಟ್ನಿ ಆದ ಬಗ್ಗೆ ನನಗೆ ಗೊತ್ತಿಲ್ಲ. ಸಂಗಯ್ಯಾ ಮರಣ ಹೊಂದಿದ ನಂತರ ಅವರ ಮಕ್ಕಳ ಹೆಸರು ವಾರಸಾ ನಾತೆಯಿಂದ ಬಂದಿರುತ್ತದೆ. ವಾರಸಾ ಪ್ರಕಾರ ವಾದಿಯರ ಹೆಸರು ದಾಖಲಾದ ವಿಷಯ ನನಗೆ ಗೊತ್ತಿಲ್ಲ. ವಾರಾಸಾ ಪ್ರಕಾರ ಯಾರಿಗೆ ಹಕ್ಕು ಇದೆ ಎಂದು ತಿಳಿದುಕೊಂಡು ನಮ್ಮ ತಂದೆಯವರ ದೊಡ್ಡಪ್ಪ ಆಸ್ತಿ ಖರೀದಿಸಿದ್ದಾರೆ. ವಾದಿಯರು ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿಲ್ಲ ಎನ್ನುವುದು ನನಗೆ ಗೊತ್ತಿಲ್ಲ.

ಕ್ರಯಪತ್ರದ ಪ್ರಕಾರ ನಮಗೆ ಕಬ್ಜಾ ಬಿಟ್ಟುಕೊಡುವಂತೆ ನಮ್ಮ ತಂದೆ ಅಥವಾ ದೊಡ್ಡಪ್ಪ ದಾವೆ ಹಾಕಿರಲಿಲ್ಲ ಆದರೆ ನಾವು ಕಬ್ಜೆಯಲ್ಲ್ ಇದ್ದೇವೆ

ಎಂದು ಸಾಕ್ಷಿ ಸ್ವತಃ ಹೇಳಿರುತ್ತಾರೆ. ಖರೀದಿ ಪಡೆದಾಗಿನಿಂದ ಜಮೀನುಗಳು ನಮ್ಮ ಕಬ್ಜೆಯಲ್ಲಿ ಇರುತ್ತವೆ. ಖರೀದಿ ಪ್ರಕಾರ ಜಮೀನುಗಳು ನಮ್ಮ ಕಬ್ಜೆಯಲ್ಲಿ ಎಂದಿಗೂ ಬಂದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೇ ಕಬ್ಜೆಯಲ್ಲಿ ಇದ್ದು ಬೆಳೆ ಬೆಳೆಯುತ್ತಿದ್ದೆವೆ ಎನ್ನುತ್ತಾರೆ. ನಾವು ಜಮೀನಲ್ಲಿ ಎಂದಿಗೂ ಕಬ್ಜೆಯಲ್ಲಿ ಇಲ್ಲ ಹಾಗೂ ಬೆಳೆ ಬೆಳೆದಿಲ್ಲ ಎಂದರೆ ಸರಿಯಲ್ಲ. ಜಮೀನುಗಳನ್ನು ಖರೀದಿಸುವ ಸಮಯದಲ್ಲಿ ಯಾರ ಹೆಸರಿನಲ್ಲಿ ಇದ್ದವು ಎಂದು ನನಗೆ ಗೊತ್ತಿದೆ. ನಮ್ಮ ತಂದೆ ಮಾರಾಟ ಮಾಡಿದವರ ಹೆಸರುಗಳು ಯಾವ ರೀತಿ ದಾಖಲಾಗಿದ್ದವು ಎಂದು ನನಗೆ ಗೊತ್ತಿಲ್ಲ. ಸಂಗಯ್ಯಾ ಹಾಗೂ ಆತನ ಮಕ್ಕಳ ಮಧ್ಯ ಆದ ವಾಟ್ನಿ ಬಗ್ಗೆ ನಮ್ಮ ಪ್ರತಿವಾದ ಪತ್ರದಲ್ಲಿ ಹಾಗೂ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವುದು ನನಗೆ ಗೊತ್ತಿಲ್ಲ. ಸಂಗಯ್ಯಾ ಹಾಗೂ ಆತನ ಮಕ್ಕಳ ಮಧ್ಯ ಆದ ವಾಟ್ನಿ ಬಗ್ಗೆ ನನ್ನ ಹತ್ತಿರ ಯಾವುದೇ ದಾಖಲೆ ಇರುವುದಿಲ್ಲ.

ಮನೆತನದ ಅಡಚಣೆಗಳ ಸಲುವಾಗಿ ಜಮೀನುಗಳನ್ನು ಮಾರಾಟ ಮಾಡಿದ್ದರು. ಮನೆತನದ ಯಾವ ರೀತಿ ಅಡಚಣೆಗಳು ನನಗೆ ಗೊತ್ತಿಲ್ಲ. ನಮ್ಮಿಂದ ಖರೀದಿ ಹಣ ಪಡೆದು ಸಾಲ ತೀರಿಸಿರುತ್ತಾರೆ. ಎಷ್ಟು ಸಾಲ, ಯಾವ ಬ್ಯಾಂಕನಿಂದ ಎಂದು ಹೇಳಲು ಬರುವುದಿಲ್ಲ. ಜಮೀನು ಮಾರಾಟವನ್ನು ಯಾವ ಉದ್ದೇಶಕ್ಕಾಗಿ ಹಾಗೂ ಯಾವ ಬ್ಯಾಂಕಿನ ಸಾಲ ತೀರಿಸುವ ಸಲುವಾಗಿ ಮಾರಾಟ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಖರೀದಿ ಪತ್ರಗಳಿಗೆ ಉತಾರದಲ್ಲಿ ಹೆಸರು ಇರುವ ಗಂಡು ಮಕ್ಕಳು ಸಹಿ ಮಾಡಿದ್ದಾರೆ. ಖರೀದಿ ಪತ್ರಗಳನ್ನು ಹಾಜರುಪಡಿಸಿದ್ದೇನೆ. ಸಾಕ್ಷಿ ದಾಖಲೆಗಳನ್ನು ಪರಿಶೀಲಿಸಿ ಅದರಲ್ಲಿ ಖರೀದಿ ಪತ್ರಗಳು ಇರುವುದಿಲ್ಲ ಎನ್ನುತ್ತಾರೆ. ಸಂಗಯ್ಯಾನ ನಾಲ್ಕು ಜನ ಮಕ್ಕಳು ಖರೀದಿ ಪತ್ರಗಳಿಗೆ ಸಹಿ ಮಾಡಿದ್ದಾರೆ ಎಂದು ತೊರಿಸಲು ಅವುಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ.

ವಾದಿಯರ ಮನೆತನಕ್ಕೆ **30** ಎಕರೆ ಒಳ್ಳೆ ಉತ್ಪನದ ಜಮೀನುಗಳು ಇದ್ದವು ಎಂದರೆ ಸರಿಯಲ್ಲ. ಜಮೀನುಗಳನ್ನು ಖರೀದಿಸಿದಾಗ ನಮ್ಮ ಕುಟುಂಬಕ್ಕೆ **7-8** ಎಕರೆ ಜಮೀನುಗಳು ಇದ್ದವು. ನಮ್ಮ ತಂದೆಗೆ ಕಿರಾಣಿ ಅಂಗಡಿ ಇಟ್ಟುಕೊಂಡಿದ್ದರು. ಕಿರಾಣಿ ಅಂಗಡಿ ಕುರಿತಾದ ಉತ್ಪನದ ದಾಖಲೆ ಹಾಜರುಪಡಿಸಿಲ್ಲ. ಹೊಲದ ಉತ್ಪನ್ನ, ಕಿರಾಣಿ ಅಂಗಡಿ ಉತ್ಪನ್ನ, ಸ್ವಲ್ಪ ಬಂಗಾರ ಮಾರಾಟ ಮಾಡಿ ಜಮೀನು ಖರೀದಿಸಿದ್ದೇವು. ಆ ಸಮಯದಲ್ಲಿ ಭತ್ತ,

ಗೋವಿನ ಜೊಳ ಹತ್ತಿ ಬೆಳೆಯುತ್ತಿದ್ದರು. ಮಳೆ ಆಶ್ರಿತ ಜಮೀನುಗಳಾಗಿದ್ದು ಮಳೆ ಆದರೆ ಫಲ ಬರುತ್ತಿತ್ತು. ನಮ್ಮ ಕುಟುಂಬದ ಆಸ್ತಿಗಳಿಂದ **7-8** ಕೀ.ಮೀ ಅಂತರದಲ್ಲಿ ಖರೀದಿಸಿದ ಆಸ್ತಿಗಳು ಇರುತ್ತವೆ. ವಾದಿಯರ ಕಟುಂಬದ ಜಮೀನಿನಲ್ಲಿ ಕೂಡಾ ಸಾಕಷ್ಟು ಮಳೆ ಬಂದು ಬೆಳೆ ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ಒಳ್ಳೆ ಬೆಳೆ ಬರುತ್ತಿತ್ತು. ವಾದಿಯರ ಜಮೀನಿನಲ್ಲಿ ಬೆಳೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ.

ವಾದಿಯರ ಮನೆತನ ದೊಡ್ಡ ಕುಟುಂಬ ಎಂದರೆ ನಿಜ. ಊರಲ್ಲಿ ಒಂದು ಸ್ಟೇಟಸ್ ಮುಂದುವರೆಸಿಕೊಂಡು ಬಂದಿದ್ದಾರೆ ಎಂದರೆ ನಿಜ. ವಾದಿಯರ ಕಟುಂಬಕ್ಕೆ ಎಂದಗೂ ಬಡತನ ಬಂದಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ವಾದಿಯರ ಕಟುಂಬಕ್ಕೆ ಸಾಕಷ್ಟು ಜಮೀನುಗಳು ಇದ್ದಿದ್ದರಿಂದ ಅವರ ಕುಟುಂಬದಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ಚೆನ್ನಾಗಿ ಮಾಡಿಕೊಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಕಳುಹಿಸಬೇಕಾದರೆ ಚೀಟಬಾಯಿ (ಪಿಡ್ ಮ್ಯಾನ) ಮೂಲಕ ಕಳುಸುತ್ತಾರೆ ಎಂದರೆ ನಿಜ. ಸದರಿ ಅವರು ನೀಡಿದ ಚೀಟಿ ಪ್ರಕಾರ ಸರ್ವೆ ನಂಬರ ನಮೂದು ಆಗುತ್ತವೆ ಎಂದರೆ ಸಾಕ್ಷಿಯು ಒಂದೊಂದು ಸಲ ಆಗುವುದಿಲ್ಲ ಎನ್ನುತ್ತಾರೆ. ಒಂದು ಸರ್ವೇ ನಂಬರ ಮೂಲಕ ಬೇರೆ ಜಮೀನಿನಲ್ಲಿ ಬೆಳೆದ ಕಬ್ಬನ್ನು ಕೂಡಾ ಕಳುಹಿಸುತ್ತಾರೆ ಎಂದರೆ ಸರಿಯಲ್ಲ. ನನಗೆ ಈಗ **7** ಎಕರೆ ಜಮೀನು ಮಾತ್ರ ಇರುತ್ತದೆ. ಎಕರೆಗೆ **25** ರಿಂದ **30** ಟನ್ ಕಬ್ಬು ಬೆಳೆ ಬೆಳೆಯುತ್ತೇನೆ. ಯಾವ ಸರ್ವೆ ನಂಬರನಲ್ಲಿ ಬೆಳೆದ ಕಬ್ಬನ್ನು ಕಳುಹಿಸಿದ್ದೇನೆ ಎಂದು ದಾಖಲೆ ಹಾಜರುಪಡಿಸಿದ್ದೇನೆ. ಸುಮಾರು **15** ವರ್ಷಗಳಿಂದ ಕಬ್ಬನ್ನು ಬೆಳೆಯುತ್ತಿದ್ದೇನೆ. ಕಾರ್ಖಾನೆಗೆ ಕಳುಹಿಸಿದ ಕಬ್ಬಿನ ವಿವರಗಳು ಕಾರ್ಖಾನೆಯಲ್ಲಿ ಲಭ್ಯವಿರುತ್ತವೆ ಎಂದರೆ ನಿಜ.

ನಾವು ಖರೀದಿಸಿದ ಜಮೀನುಗಳ ಚೆಕ್ ಬಂದಿ ಗೊತ್ತಿರುತ್ತದೆ. ಸರ್ವೇ ನಂ.**62** ರ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಹಂಪಿಹೋಳೆ ಅವರ ಆಸ್ತಿ, ಉತ್ತರಕ್ಕೆ ರಸ್ತೆ ಮತ್ತು ಕೆರೆ, ದಕ್ಷಿಣಕ್ಕೆ ಜಮೀನು ಇದ್ದು ಅವರ ಹೆಸರು ನೆನಪಿರುವುದಿಲ್ಲ. ಸರ್ವೇ ನಂ.**61** ರ ಪೂರ್ವಕ್ಕೆ ನಮ್ಮ ಸ್ವಂತ ಜಮೀನು, ಪಶ್ಚಿಮಕ್ಕೆ ಹಂಪಿಹೋಳೆ ಆಸ್ತಿ, ಉತ್ತರಕ್ಕೆ ಕೆರೆ, ದಕ್ಷಿಣಕ್ಕೆರಸ್ತೆ ಇರುತ್ತದೆ. ಸರ್ವೆ ನಂ.**61** ರ ಪೂರ್ವಕ್ಕೆ ಇರುವ ಜಮೀನಿನ ಸರ್ವೇ ನಂ.**60/1** ಅಥವಾ **60/2.** ಸದರಿ ಜಮೀನನ್ನು ನಮ್ಮ ತಂದೆ ಖರೀದಿಸಿದ್ದರು.

ಸಂಗಯ್ಯಾ ಅವರಿಗೆ ಜಮೀನು ಹೇಗೆ ಬಂದಿದೆ ಎಂದು ಗೊತ್ತಿಲ್ಲ. ಈ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ನೀಡಿಲ್ಲ. ನಾವು ಖರೀದಿಸಿದ ಜಮೀನುಗಳಲ್ಲಿ ಸಂಗಯ್ಯಾನಿಗೆ ಆಸ್ತಿ ಹೇಗೆ ಬಂದಿದೆ ಎಂದು ನಮೂದಿಸಿರುವುದು ಗೊತ್ತಿಲ್ಲ. ವಾದಿಯರು ಹಾಜರುಪಡಿಸಿದ ದಾಖಲೆಗಳನ್ನು ನಾನು ನೋಡಿಲ್ಲ. ನನಗೆ ದಾವಾ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಕೂಡಾ ದಾವಾ ಆಸ್ತಿಗಳನ್ನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಸಂಗಯ್ಯಾನ ಮಕ್ಕಳು ಎಂದರೆ ನಿಜ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಪಾಲು ಹೋಗುತ್ತದೆ ಎಂದು ಸುಳ್ಳು ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಸಲ್ಲಿಸಿದ ಪ್ರತಿವಾದ ಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ವಾದಿಯರ ಕುಟುಂಬದ ದಾಖಲೆಗಳನ್ನು ಪರಿಶೀಲಿಸದೆ ಸುಳ್ಳು ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಈಗಲು ಕೂಡಾ ಒಟ್ಟು ಕಟುಂಬದ ಆಸ್ತಿ ಎಂದರೆ ಸರಿಯಲ್ಲ. ನಮ್ಮ ಪ್ರಕಾರ ನಾವು ಖರೀದಿ ಮಾಡಿದ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳಲ್ಲಿ ವಾದಿಯರು ಸ್ವಾದಿನ ಹೋಂದಿದ ಬಗ್ಗೆ ನನಗೆ ಗೊತ್ತಿಲ್ಲ. ಖರೀದಿ ಪತ್ರಗಳು ಸೃಷ್ಟಿಸಿದ ದಾಖಲೆಗಳಾಗಿದ್ದು ಅವುಗಳನ್ನು ಅಮಲಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ಖರೀದಿ ಪ್ರಕಾರ ಯಾವುದೇ ವ್ಯವಹಾರಗಳು ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಹಕ್ಕು ಇದ್ದು ಅವರೆ ಅವುಗಳ ಸ್ವಾದಿನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**